!

# ರಾಷ್ಟ್ರೀಯ ಮೌಲ್ಯೀಕರಣ ಮತ್ತು ಮಾನ್ಯತಾ ಪರಿಷತ್ತು (ನ್ಯಾಕ್)

## ಕನ್ನಡ ರಾಜ್ಯೋತ್ಸವ ಆಚರಣೆ- ವರದಿ

ಕನ್ನಡ ರಾಜ್ಯೋತ್ಸವ ಆಚರಣೆ ಪ್ರಯುಕ್ತ ಕನ್ನಡ ಅನುಷ್ಠಾನ ವಿಭಾಗದಿಂದ ಕಾರ್ಯಕ್ರಮವನ್ನು **೧೯ನೇ ನವೆಂಬರ್ ೨೦೧೯** ರಂದು ನ್ಯಾಕ್ ಸಂಸ್ಥೆಯ ಸಮ್ಮೇಳನ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ನ್ಯಾಕ್ ಸಂಸ್ಥೆಯ ಉಪಸಲಹೆಗಾರರಾದ ಡಾ. ಗಣೇಶ್ ಹೆಗಡೆ ಅವರು ಅತಿಥಿಗಳಿಗೆ ಸ್ವಾಗತವನ್ನು ಕೋರಿದರು. ಈ ಕಾರ್ಯಕ್ರಮದಲ್ಲಿ ನಮ್ಮ ರಾಷ್ಟ್ರಕವಿ ಕುವೆಂಪು ಅವರು ರಚಿಸಿದ ನಾಡಗೀತೆಯನ್ನು ಹಾಡಲಾಯಿತು.




ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಡಾ. ಗುರುರಾಜ ಕರಜಗಿ ಅವರು ಭಾಗವಹಿಸಿದ್ದರು. ನ್ಯಾಕ್ ಸಂಸ್ಥೆಯ ನಿರ್ದೇಶಕರಾದ ಪ್ರೊ. ಎಸ್. ಸಿ. ಶರ್ಮ ರವರು ಅತಿಥಿಗಳಿಗೆ ಸನ್ಮಾನ ಮಾಡಿದರು.






ಉನ್ನತ ಶಿಕ್ಷಣ ತಜ್ಞರೂ, ಉತ್ತಮ ವಾಗ್ಮಿಗಳೂ, ಶ್ರೇಷ್ಠ ಚಿಂತಕರೂ, ಸೃಜನಶೀಲ ಅಧ್ಯಾಪನ ಕೇಂದ್ರದ ಸಂಸ್ಥಾಪಕರು ಹಾಗೂ ನಿರ್ದೇಶಕರೂ ಆದ **ಡಾ. ಗುರುರಾಜ ಕರಜಗಿ** ಅವರು ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಇವರು ಕನ್ನಡ ಭಾಷೆಯ ಮಹತ್ವ, ಕನ್ನಡದ ಕವಿಗಳು ಮತ್ತು ಅವರು ನೀಡಿದ ಕೊಡುಗೆಗಳನ್ನು ಸ್ಮರಿಸಿಕೊಂಡು ಕನ್ನಡ ಭಾಷೆಯನ್ನು ಬೆಳೆಸಬೇಕು ಎಂದು ತಮ್ಮ ವ್ಯಾಖ್ಯಾನದ ಮೂಲಕ ಹಂಚಿಕೊಂಡರು.







ಕೊನೆಯಲ್ಲಿ ಡಾ. ವಿಷ್ಣು ಮಹೇಶ್ ಅವರು ವಂದನಾರ್ಪಣೆಯನ್ನು ಮಾಡಿದರು. ಈ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಸುನೀತಾ ಅವರು ಮಾಡಿದರು.

ಡಾ. ಗಣೇಶ್ ಹೆಗಡೆ, ಶ್ರೀ ಚಂದ್ರಶೇಖರ್ ಹಾಗೂ ಶ್ರೀ ರಾಮಪ್ಪ ಇವರು ಈ ಕಾರ್ಯಕ್ರಮದ ಜವಾಬ್ದಾರಿಯನ್ನು ವಹಿಸಿದ್ದರು.



!